<u>ಇಂದು ದಿಃ **07-12-2021** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲು ವಾದಿ ಪರಃ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನಮ್ಮ ಅಜ್ಜ ದೊಡ್ಡಲಿಂಗಪ್ಪನವರ ಮೊಮ್ಮಕ್ಕಳ ಪೈಕಿ ನಾನೇ ಹಿರಿಯವನು ಎಂದರೆ ಸರಿ. ದೊಡ್ಡಲಿಂಗಪ್ಪನವರ ಗಂಡು ಮೊಮ್ಮಕ್ಕಳ ಪೈಕಿ ವಾದಿ 2 ನೇಯದವರು ಎಂದರೆ ಸರಿ. ನನ್ನ ತಂದೆ ಮುರಿಗೆಪ್ಪನ ಎಲ್ಲಾ ಮಕ್ಕಳ ಪೈಕಿ ನಾನೇ ಹಿರಿಯ ಮಗನಿರುತ್ತೇನೆ. ನಾನು ಒಟ್ಟು ಕುಟುಂಬದಿಂದ ಬೇರೆಯಾಗಿ ಹೋದಾಗ ವಾದಿಯ ವಯಸ್ಸು 15 ವರ್ಷ ಹಾಗೂ 5 ನೇ ಪ್ರತಿವಾದಿ 5-6 ವರ್ಷಗಳಿರಬಹುದು. ನಾನು ಒಟ್ಟು ಕುಟುಂಬದಿಂದ ಹೊರಗೆ ಹೋದಾಗ ವಾದಿಯ ವಯಸ್ಸು 11, 5 ನೇ ಪ್ರತಿವಾದಿಯ ವಯಸ್ಸು 1 ವರ್ಷಕ್ಕಿಂತ ಕಡಿಮೆ ಇತ್ತು ಎನ್ನುವುದು ಸರಿಯಲ್ಲ. ನಾನು 22 ನೇ ವಯಸ್ಸಿನಲ್ಲಿ ಮನೆ ಬಿಟ್ಟು ಯಾಕೆ ಹೋಗಿದ್ದೇನೆ ಎಂದು ನನ್ನ ತಕರಾರುನಲ್ಲಿಯಾಗಲೀ ಅಥವಾ ನನ್ನ ಮುಖ್ಯವಿಚಾರಣೆಯಲ್ಲಿಯಾಗಲೀ, ಮರು ಉತ್ತರದಲ್ಲಿಯಾಗಲೀ ಹೇಳಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1982 ರಿಂದ ದಿನಾಂಕಃ18-08-1986 ರವರೆಗೆ ನಾನು ಬೇರೆಯವರ ಮನೆಯಲ್ಲಿ ವಾಸವಾಗಿರುತ್ತೇನೆ ಎಂದು ಹೇಳಿದ್ದು, ಅದು ಯಾರ ಮನೆಯಲ್ಲಿದ್ದೆ ಎನ್ನುವುದನ್ನು ಎಲ್ಲಿಯೂ (ತಕರಾರುನಲ್ಲಿಯಾಗಲೀ ಅಥವಾ ನನ್ನ ಮುಖ್ಯವಿಚಾರಣೆಯಲ್ಲಿಯಾಗಲೀ, ಮರು ಉತ್ತರದಲ್ಲಿಯಾಗಲೀ) ಹೇಳಿಲ್ಲ ಎಂದರೆ ಸರಿ. ನಿ.ಡಿ-2 ರ ಪ್ರಕಾರ ನಮ್ಮ ತಂದೆಗೆ 5 ಆಸ್ತಿಗಳು ಬಂದಿರುತ್ತವೆ. ನಿ.ಡಿ-2 ರ ಕ್ರಮ ಸಂಖ್ಯೆ 3 ಮತ್ತು 5 ರಲ್ಲಿ ತೋರಿಸಿದ ಆಸ್ತಿಗಳು ನಿ.ಡಿ-56 ರಲ್ಲಿ ತೋರಿಸಿದ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ದಾವಾ ಸಿ ಷೆಡ್ಯೂಲ್ ನ ಅನುಕ್ರಮ ನಂಬರ್ 1 ಮತ್ತು 2 ಆಸ್ತಿಗಳು ನಿ.ಡಿ-2 ರಲ್ಲಿ ತೋರಿಸಿದ ಆಸ್ತಿಗಳು ಬೇರೆ ಬೇರೆಯಾಗಿರುತ್ತವೆ. ದಾವಾ ಸಿ ಷೆಡ್ಯೂಲ್ ನ ಐಟಂ ನಂಬರ್ 1, 2 ಆಸ್ತಿಗಳು ನಮ್ಮ ಆಸ್ತಿಗಳಾಗಿರುವುದಿಲ್ಲ. ನಿ.ಡಿ-2 ರ ಅನುಕ್ರಮ ನಂಬರ್ 2 ರಲ್ಲಿ ತೋರಿಸಿದ ಸರ್ವೆ ನಂಬರ್ 29 ಕ್ಷೇತ್ರ 1 ಎಕರೆ 31 ಗುಂಟಾ ಜಮೀನನ್ನು ನಾನು ಮತ್ತು ನಮ್ಮ ತಂದೆ ಹಾಗೂ ವಾದಿ ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸರ್ವೆ ನಂಬರ್ 18/1 ಕ್ಷೇತ್ರ 2 ಎಕರೆ 26 ಗುಂಟಾ ಜಮೀನಿನ ಪೈಕಿ ನಾನು ಮತ್ತು ವಾದಿ ಮೌಖಿಕ ವಿಭಾಗ ಮಾಡಿಕೊಂಡು ಸದರಿ ವಿಭಾಗದ ಮೂಲಕ ನನಗೆ ಕ್ಷೇತ್ರ 1 ಎಕರೆ 6 ಗುಂಟೆ ಹಾಗೂ ವಾದಿಗೆ 20 ಗುಂಟಾ ಬಂದಿದೆ ಎಂದು ಹೇಳಿ ಬರೆಯಿಸಿದ್ದೇನೆ ಎಂದರೆ ಸರಿ. ದಾವಾ ಸಿ ಷೆಡ್ಯೂಲ್ ನ ಐಟಂ ನಂಬರ್ 1, 2 ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ ಎಂದು ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸರಿ. ನಿ.ಡಿ-2 ರಲ್ಲಿ ತೋರಿಸಿದ ಉಳಿದ 3 ಆಸ್ತಿಗಳ ಬಗ್ಗೆ ನಾನು ಪ್ರತಿವಾದಿ ಪತ್ರದಲ್ಲಿಯಾಗಲೀ, ಸಾಕ್ಷಿಯಲ್ಲಿಯಾಗಲೀ ಯಾವ ರೀತಿ ಹಂಚಿಕೆಯಾಗಿದೆ ಎಂದು ಹೇಳಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಕಂಡಿಕೆ 8 ರಲ್ಲಿ ಹೇಳಿದಂತೆ ಯಾರಿಗೆ ಯಾವ ಆಸ್ತಿ ಬಂದಿದೆ ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ. ಉಳಿದ 3 ಆಸ್ತಿಗಳನ್ನು ಹಂಚಿಕೆಮಾಡಿಕೊಂಡಿದ್ದೇವೆ ಎಂದು

ನಾನು ಎಲ್ಲಿಯೂ ಹೇಳಿಲ್ಲ. ಆದರೆ ನಾವು ವಿಭಾಗ ಮಾಡಿಕೊಂಡಿದ್ದು, ನಿ.ಡಿ-2 ರಲ್ಲಿ ತೋರಿಸಿದ 36X19 ಆಸ್ತಿಯನ್ನು ವಾದಿಗೆ ಕೊಟ್ಟಿದ್ದೇವೆ. ಕಣದ ಜಾಗವನ್ನು 66X29 ನಾನು ಮತ್ತು ವಾದಿ ತಲಾ ಅರ್ಧದಂತೆ ಹಂಚಿಕೆ ಮಾಡಿಕೊಂಡಿದ್ದೇವೆ. 36X9 ಆಸ್ತಿಯನ್ನು ನಾವು ಹಂಚಿಕೆ ಮಾಡಿಕೊಂಡಿರುವುದಿಲ್ಲ ಎಂದು ಸ್ವ-ಇಚ್ಚೆಯಿಂದ ಹೇಳಿರುತ್ತಾರೆ. ನಾವು ವಿಭಾಗ ಮಾಡಿಕೊಂಡ ನಂತರ ದಾವಾ ಎ ಷೆಡ್ಯೂಲ್ ನ ಆಸ್ತಿ ಏಕೆ ಖಾತೆ ಆಗಿರುವುದಿಲ್ಲ ಎಂದು ಹೇಳಿರುವುದಿಲ್ಲ. 1986 ರಿಂದ ಸಿ ಷೆಡ್ಯೂಲ್‌ನ ಅನುಕ್ರಮ ನಂಬರ್ 3 ಮತ್ತು 4 ರ ಜನತಾ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. 1986 ರಿಂದ 1997 ವರೆಗೆ ನಾನು ಜನತಾ ನಿವೇಶನಕ್ಕೆ ಕಂದಾಯ ವಗಾರೆ ಪಾವತಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಹತ್ತಿರ ಅವುಗಳು ಲಭ್ಯ ಇರುವುದಿಲ್ಲ. ನಮ್ಮ ತಂದೆ ಮೊದಲು ಜನತಾ ನಿವೇಶನದಲ್ಲಿ ಕೊಟ್ಟಿಗೆ ಮನೆಯನ್ನು ಕಟ್ಟಿಸಿಕೊಂಡು ಉಪಯೋಗಿಸುತ್ತಿದ್ದರು ಎನ್ನುವುದು ಸರಿಯಲ್ಲ. ಕೊಟ್ಟಿಗೆ ಮನೆಯು ನಮ್ಮ ತಂದೆಯ ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ 5 ಭಾಗ ಮಾಡಿಕೊಂಡು ಧನಕರುಗಳನ್ನು ಕಟ್ಟಲು ಉಪಯೋಗಿಸಿದ್ದರು ಎನ್ನುವುದು ಸರಿಯಲ್ಲ. ನಮ್ಮ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಾಗ ಬಸಪ್ಪ ಮತ್ತು ನಾಗರಾಜಪ್ಪ ಎನ್ನುವವರು ಪಾಲಿಗೆ ಹಳೆ ಮನೆ ಬಂದಿತ್ತು. ನಿ.ಡಿ-2 ರ 3 ನೇ ಸ್ವತ್ತು, ಮುರಿಗೆಪ್ಪ ಅಂದರೆ ನಮ್ಮ ತಂದೆ ಹಾಗೂ ಚಿಕ್ಕಪ್ಪನಾಗದ ಪಂಚಪ್ಪನವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿ. ಮಲ್ಲೇಶಪ್ಪನ ಹಿಸ್ಸೆಗೆ ಒಟ್ಟು ಕುಟುಂಬದ ಕಣದ ಜಾಗ ಬಂದಿತ್ತು ಎಂದರೆ ಸರಿ. ಮಲ್ಲೇಶಪ್ಪ ಎನ್ನುವವರು ಜನತಾ ನಿವೇಶನದ ಕೊಟ್ಟಿಗೆ ಮನೆಯಲ್ಲಿ ವಾಸವಾಗಿದ್ದ ಎನ್ನುವುದು ಸರಿಯಲ್ಲ. ಮಲೇಶಪ್ಪ ತನಗೆ ಬಂದ ಜಾಗದಲ್ಲಿ ಮನೆ ಕಟ್ಟಿಕೊಂಡು ಕೊಟ್ಟಿಗೆ ಮನೆಯನ್ನು ಬಿಟ್ಟು ಹೋಗಿದ್ದಾರೆ ಎನ್ನುವುದು ಸರಿಯಲ್ಲ. ನಿ.ಡಿ-2 ರ 4 ರ ಆಸ್ತಿಯನ್ನು ಮಲ್ಲೇಶಪ್ಪನಿಗೆ ಕೊಟ್ಟು, ಜನತಾ ನಿವೇಶನದಲ್ಲಿದ್ದ ಮಲ್ಲೇಶಪ್ಪ ಮತ್ತು ಬಸಪ್ಪನ ಪಾಲನ್ನು ಪಡೆದುಕೊಂಡು ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ನಿ.ಪಿ-5 ರ ಕಂಡಿಕೆ 5 ರಲ್ಲಿ 36X9 ಆಸ್ತಿಯನ್ನು ಮಲ್ಲೇಶಪ್ಪನಿಗೆ ಮಾರಾಟ ಮಾಡಿದ್ದೇವೆ ಎಂದು ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ.

ಸಾಕ್ಷಿಗೆ ಒಂದು ಬಾವ ಚಿತ್ರವನ್ನು ತೋರಿಸಲಾಗಿ ಮನೆಯ ಮುಂದೆ ಕಾಣಿಸುವ ಖಾಲಿ ಜಾಗ 36X9 ಇರುತ್ತದೆ ಎಂದರೆ ಸರಿ. ಬಾ ಚಿತ್ರದಲ್ಲಿ ಕಾಣುವ ತಗಡಿನ ಮನೆ ಮಲ್ಲೇಶಪ್ಪನಿಗೆ ಸೇರಿದ್ದು, ಸದರಿ ಬಾವ ಚಿತ್ರವನ್ನು ನಿ.ಪಿ-43 ಎಂದು ಗುರುತಿಸಲಾಯಿತು. ಸದರಿ ಮನೆ ಮತ್ತು ಅದರ ಮುಂದಿನ ಜಾಗ ಸೇರಿ 36X9 ವಿಸ್ತೀರ್ಣದ ನಿವೇಶನ ಎನ್ನುವುದು ಸರಿಯಲ್ಲ. ಸದರಿ ಮನೆ ಮತ್ತು ಕುಲ್ಲಾ ಜಾಗವನ್ನು ಮಲೇಶಪ್ಪನಿಗೆ ಕೊಟ್ಟು ಜನತಾ ನಿವೇಶನದಲ್ಲಿ 2 ಪಾಲನ್ನು ಪಡೆದುಕೊಂಡು ಅದಲು ಬದಲು ಮಾಡಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. 36X9 ವಿಸ್ತೀರ್ಣದ ಆಸ್ತಿಯ ಚಾಲ್ತಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.